ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು** 8
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 6/11/20

# ಶ್ವೇತ ಭವನದತ್ತ ಡೆಮಾಕ್ರಾಟ್ ಬೈಡೆನ್

## । ಆರು ಪ್ರಾಂತ್ಯಗಳಿಗಾಗಿ ನಡೆದಿದೆ ಫೈನಲ್ ಫೈಟ್ । ಎರಡು ಫಲಿತಾಂಶಗಳ ವಿರುದ್ಧ ದಾವೆ

ವಾಷಿಂಗ್ಟನ್/ನ್ಯೂಯಾರ್ಕ್: ವಿಶ್ವವನ್ನೇ ಸೆಳೆದಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿ ಜೋ ಬೈಡೆನ್ ಜಯದತ್ತ ಸಾಗುತ್ತಿದ್ದಾರೆ. ವಿಸ್ಕಾನ್ಸಿನ್, ಮಿಚಿಗನ್ ಪ್ರಾಂತ್ಯಗಳಲ್ಲಿ ಬೈಡೆನ್ ಜಯ ಸಾಧಿಸಿದ್ದಾರೆ. ಮ್ಯಾಜಿಕ್ ನಂಬರ್ 270ಕ್ಕಿಂತ ಅವರು ಕೇವಲ ಆರು ಮತಗಳ ಅಂತರ ದಿಂದ ಹಿಂದೆ ಇದ್ದಾರೆ- ಅಂದರೆ 264 ಎಲೆಕ್ಟೋರಲ್ ಮತ ಪಡೆದಿದ್ದಾರೆ. ಹಾಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 214 ಎಲೆಕ್ಟೋರಲ್ ಮತಗಳನ್ನು ಪಡೆದುಕೊಂಡಿದ್ದಾರೆ.

ಅರಿಜೋನಾ, ನೆವಾಡದಲ್ಲಿ ಕೂಡ ಡೆಮಾಕ್ರಾಟಿಕ್ ಪಕ್ಷದ ಅಭ್ಯರ್ಥಿ ಹಿಡಿತ ಸಾಧಿಸುವತ್ತ ಮುನ್ನಡೆದಿದ್ದಾರೆ. ಟ್ರಂಪ್ ಪೆನ್ಸಿಲ್ವೇನಿಯಾ, ನಾರ್ತ್ ಕೆರೋಲಿನಾ, ಜಾರ್ಜಿಯಾದಲ್ಲಿ ಸದ್ಯಕ್ಕೆ ಮುನ್ನಡೆ ಸಾಧಿಸಿದ್ದಾರೆ. ವಾರಾಂತ್ಯದ ಹೊರತಾಗಿ ಅಂತಿಮ ಹಂತದ ಫಲಿತಾಂಶ ಸಿಗುವುದು ಸಾಧ್ಯವಿಲ್ಲ. ಇದೇ ವೇಳೆ 'ಸಿಎನ್ಎನ್' ವರದಿ ಮಾಡಿರುವ ಪ್ರಕಾರ ಅಲಾಸ್ಕಾ, ಅರಿಜೋನಾ, ಜಾರ್ಜಿಯಾ, ನೆವಾಡಾ, ನಾರ್ತ್ ಕೆರೋಲಿನಾ, ಪೆನ್ಸಿಲ್ವೇನಿಯಾದಲ್ಲಿ ಎಣಿಕೆ ಪೂರ್ತಿಯಾಗಿಲ್ಲ. ಈ ಆರು ಪ್ರಾಂತ್ಯಗಳಿಗೇ ಇಬ್ಬರು ನಾಯಕರು ಪೈಪೋಟಿ ನಡೆಸುತ್ತಿದ್ದಾರೆ.

ಅಮೆರಿಕ ಅಧ್ಯಕ್ಷ ಸಮರ

**ಎಣಿಕೆ ನಿಲ್ಲಿಸಿ:** ಮತ ಎಣಿಕೆ ಪ್ರಕ್ರಿಯೆ ಮುಂದುವರಿಯುತ್ತಿದ್ದಂತೆಯೇ, ಟ್ರಂಪ್ ಎಣಿಕೆ ನಿಲ್ಲಿಸಿ ಎಂದು ಒತ್ತಾಯಿಸಿ ಟ್ವೀಟ್ ಮಾಡಿದ್ದಾರೆ. ಸೋಲಿನ ಛಾಯೆಯಿಂದಲೇ ಅವರು ಈ ಟ್ವೀಟ್ ಮಾಡಿದ್ದಾರೆಂದು ವಿಶ್ಲೇಷಿಸಲಾಗುತ್ತಿದೆ. ಇದರ ಜತೆಗೆ ಟ್ರಂಪ್‌ರ ಪ್ರಚಾರ ತಂಡ ಬೈಡೆನ್ ವಿರುದ್ಧ ಮಿಚಿಗನ್, ವಿಸ್ಕಾನ್ಸಿನ್ ಫಲಿತಾಂಶಗಳ ವಿರುದ್ಧ ದಾವೆ ಹೂಡಿದೆ.



### ಬೈಡೆನ್‌ಗೆ ಸಿಕ್ಕಿತು ದಾಖಲೆ ಮತಗಳು

ಚುನಾವಣೆಯಲ್ಲಿ ಡೆಮಾಕ್ರಾಟಿಕ್ ಪಕ್ಷದ ನಾಯಕ ಜೋ ಬೈಡೆನ್ 7.8 ಕೋಟಿ ಮತಗಳನ್ನು ಪಡೆದುಕೊಂಡಿದ್ದಾರೆ. ಈ ಮೂಲಕ ಅಮೆರಿಕ ಚುನಾವಣಾ ಇತಿಹಾಸದಲ್ಲಿ ಅತ್ಯಂತ ಹೆಚ್ಚು ಮತಗಳನ್ನು ಪಡೆದ ಅಧ್ಯಕ್ಷೀಯ ಹುದ್ದೆಯ ಅಭ್ಯರ್ಥಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಜತೆಗೆ 2008ರ ಚುನಾವಣೆಯಲ್ಲಿ ಬರಾಕ್ ಒಬಾಮ ಪಡೆದಿದ್ದ 6,94,56,897 ಮತಗಳ ದಾಖಲೆ ಮುರಿದಿದ್ದಾರೆ.

| ಜೋ ಬೈಡೆನ್ | ಟ್ರಂಪ್ |
|---|---|
| 264 ಎಲೆಕ್ಟೋರಲ್ ಮತಗಳು | 214 ಎಲೆಕ್ಟೋರಲ್ ಮತಗಳು |
| 7,21,84,981 ಒಟ್ಟು ಮತ | 6,86,90,218 ಒಟ್ಟು ಮತ |